## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ ಪೀಠ ಬಸವಕಲ್ಯಾಣ

## S.C.No. 5021/2025

| | | |
|---|---|---|
| ಹೆಸರು | : | ವಿಜಯಕುಮಾರ |
| ತಂದೆಯ ಹೆಸರು | : | ದಶರಥ ನಾಯಕ್ |
| ವಯಸ್ಸು | : | 38 ವರ್ಷ. |
| ಉದ್ಯೋಗ | : | ಪಿ.ಎಸ್.ಐ.<br>ಹಳ್ಳಿಖೇಡ(ಬಿ) ಪೊಲೀಸ ಠಾಣೆ |
| ವಾಸಸ್ಥಳ | : | ಹಳ್ಳಿಖೇಡ(ಬಿ) |

**ಚಾ.ಸಾ.21**
**ಅ.ಸಾ. 08**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರವರಿಂದಃ-**

ನಾನು ಹಳ್ಳಿಖೇಡ(ಬಿ) ಪೊಲೀಸ ಠಾಣೆಯಲ್ಲಿ ದಿನಾಂಕ: 01.08.2024 ರಿಂದ ಇಲ್ಲಿಯ ವರೆಗೆ ಪಿ.ಎಸ್.ಐ., ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ: 05.10.2024 ರಂದು ಚಾ.ಸಾ. 20 ರವರಿಂದ ಕಡತವನ್ನು ವಹಿಸಿಕೊಂಡು ತನಿಖೆಯ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದೆನು. ಅದೇ ದಿನ ಚಾ.ಸಾ. 12 ಮತ್ತು 19 ರವರ ಹೇಳಿಕೆ ದಾಖಲ್ ಮಾಡಿಕೊಂಡಿರುತ್ತೇನೆ. ದಿ: 06.10.2024 ರಂದು ಮತ್ತೊಮ್ಮೆ ಕಡತವನ್ನು ಪರಿಶೀಲಿಸಿ ಆರೋಪಿತರ ಸಾಕಷ್ಟು ಸಾಕ್ಷಿ ಪುರಾವೆಗಳು ಲಭ್ಯವಿದ್ದು ಅವರ ವಿರುದ್ಧ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ :-</u>**

ಚಾ.ಸಾ.12 ಮತ್ತು 19 ನನ್ನ ಮುಂದೆ ತಮ್ಮ ಯಾವುದೇ ಹೇಳಿಕೆಗಳನ್ನು್ ನೀಡಿಲ್ಲಾ ಮತ್ತು ತನಿಖೆಯಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿಲ್ಲಾ ಎಂದು ಕಂಡು ಬಂದರೂ ಸಹಿತ ನಾನು ನ್ಯಾಯಾಲಯಕ್ಕೆ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ ಅಂತಾ ಅನ್ನುವುದು ಸರಿ ಅಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ.